> ಪುಸ್ತಕಗಳ ಬಗೆಗಿನ ಈ ಸರಣಿಗೆ ನಾನು ಕೊಡುತ್ತಿರುವ ಹೆಸರು ಪಠಣ ಕುತೂಹಲ. ಈ ಹೆಸರನ್ನು ನಾನು ಅಂಕಣಕಾರ, ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಅವರಿಂದ ಎರವಲು ಪಡೆದಿದ್ದೇನೆ. ಪರಕಾಲ ಪ್ರಭಾಕರ್ ತೆಲುಗಿನ ಸಾಹಿತ್ಯಕೃತಿಗಳನ್ನು ಜನಪ್ರಿಯಗೊಳಿಸಲು ವಾರಕ್ಕೆ ಒಂದು ಬಾರಿ, ಒಂದು ಪ್ರಮುಖ ಕಥೆ–ಕವಿತಾಗುಚ್ಛವನ್ನು ಓದಿ ವಿಡಿಯೊ ಮಾಡುತ್ತಾರೆ. ಅದಕ್ಕವರು ಕೊಟ್ಟಿರುವ ಹೆಸರು 'ಪಠಣ ಕುತೂಹಲಂ'. ಅವರ ಸಮ್ಮತಿಯೊಂದಿಗೆ ಈ ಲೇಖನಮಾಲೆಗೆ ನಾನು 'ಪಠಣ ಕುತೂಹಲ'ವೆಂಬ ಹೆಸರನ್ನು ಕೊಡುತ್ತಿದ್ದೇನೆ. ಇದು ಓದುಗರ ಆಸಕ್ತಿಯನ್ನು ಹೆಚ್ಚಿಸಬಹುದು ಎನ್ನುವ ನಂಬಿಕೆಯೊಂದಿಗೆ, ಪ್ರಭಾಕರ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತಾ...
>
> —ಲೇಖಕ

ಶ್ರೇಣಿಯಲ್ಲಿ ಪ್ರಯಾಣ ಮಾಡಿ ತನ್ನ ಸಹಜ ಸ್ಥಾನವನ್ನು ತ್ಯಾಗ ಮಾಡಿದಂತೆ ಕಂಡರೆ, ಹಾಗೆ ತ್ಯಾಗ ಮಾಡುವ ಸವಲತ್ತೇ ಇಲ್ಲದ ವರ್ಗದಿಂದ ಅಂಬೇಡ್ಕರ್ ಬರುತ್ತಾರೆ. ಹೀಗಾಗಿ, ಗಾಂಧಿಗೆ ಮತ್ತು ಅವರ ಅನುಯಾಯಿಗಳಿಗೆ ಇರುವ ಹಾಸ್ಯ–ವಿಡಂಬನೆಯ ಬಗೆಗಿನ ತಾಳ್ಮೆ ಅಂಬೇಡ್ಕರ್ ಅನುಯಾಯಿಗಳಿಗೆ ಇರಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ, ನಾವು ಮಹಿಳೆಯರನ್ನು, ಅಲ್ಪಸಂಖ್ಯಾತರನ್ನು, ದಲಿತರನ್ನು ಚಿತ್ರಿಸುವಾಗ ತೋರಬೇಕಾದ ಸಂವೇದನೆ ಭಿನ್ನ ಸ್ತರದಲ್ಲಿರಬೇಕಾಗುತ್ತದೆ.

ಈ ಪುಸ್ತಕದಲ್ಲಿರುವ ಅನೇಕ ವ್ಯಂಗ್ಯಚಿತ್ರಗಳು ಅಂಬೇಡ್ಕರ್ ಬಗ್ಗೆ ಕನಿಷ್ಠ ಮಟ್ಟದ ಸಂವೇದನೆಯನ್ನೂ ತೋರುವುದಿಲ್ಲ. ಅಂಬೇಡ್ಕರ್ ಪುಟ್ಟದಾಗಿ ಕುಬ್ಜವಾಗಿ ಕಾಣಿಸುತ್ತಾರೆ. ಆ ಬಗ್ಗೆ ಶ್ಯಾಮ್ ಸುಂದರ್ ಟಿಪ್ಪಣಿಯನ್ನು ಮಾಡಿದ್ದಾರೆ. ಅವರ ವಿಚಾರಗಳಲ್ಲಿ ಅಂತರ್ವಿರೋಧವಿರುವಂತೆ ಕಾಣುತ್ತದೆ. ಅವರ ನಿಲುವುಗಳನ್ನು ವ್ಯಂಗ್ಯಚಿತ್ರಕಾರರು ಅನೇಕ ರೀತಿಯ ಕುಹಕಕ್ಕೆ ಒಳಪಡಿಸಿದ್ದಾರೆ. ಅಂಬೇಡ್ಕರ್ ಯಾವ ಹಿನ್ನೆಲೆಯಿಂದ, ಯಾವ ವಿಚಾರಧಾರೆಯನ್ನು ಹೊತ್ತು, ಯಾವ ಹಕ್ಕುಗಳಿಗಾಗಿ ಮಾತಾಡುತ್ತಿದ್ದಾರೆ ಎನ್ನುವುದನ್ನು ವರ್ಣವ್ಯವಸ್ಥೆಯ ಮೇಲ್ಮಟ್ಟದಲ್ಲಿರುವವರು ಅರ್ಥಮಾಡಿಕೊಳ್ಳುತ್ತಿಲ್ಲ ಎನ್ನುವುದು ಟಿಪ್ಪಣಿಗಳಿಂದಾಗಿ ಸ್ಪಷ್ಟವಾಗಿ ಕಾಣಿಸುತ್ತದೆ. ಇದು ಅಸ್ತಿತ್ವದ ಮತ್ತು ಅಸ್ಮಿತೆಯ ಪ್ರಶ್ನೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಇಲ್ಲಿ ನಾವು ಗಮನಿಸಬೇಕಾದ ಸೂಕ್ಷ್ಮ ಒಂದಿದೆ. ಸಾಮಾನ್ಯವಾಗಿ ಪ್ರಬಲ ವಿಚಾರಧಾರೆಯಡಿಯಲ್ಲಿ ಅಲ್ಪಸಂಖ್ಯಾತರ ಮಾತು ವಿಚಾರಗಳು ಅಡಕವಾಗಿಬಿಡುತ್ತವೆ. ಗಾಂಧೀವಾದಿಗಳು ಸ್ವಾತಂತ್ರ್ಯ ಹೋರಾಟಕಾಲದ ನಾಯಕರಿಗೆ ಸಮಾನವಾಗಿ, ಪಟೇಲ್, ಬೋಸ್, ನೆಹರೂ ಅವರಂತಹ ನಾಯಕರಷ್ಟೇ ಪ್ರಾಮುಖ್ಯತೆಯನ್ನು ಅಂಬೇಡ್ಕರರಿಗೆ ನೀಡಿ, ಅವರನ್ನು ತಮ್ಮ ಆಲದ ಮರದಡಿಯಲ್ಲಿ ಸೇರಿಸಿಕೊಂಡುಬಿಡುತ್ತಾರೆ. ಆದರೆ, ಅಂಬೇಡ್ಕರ್‌ವಾದಿಗಳು ತಮ್ಮ ಅಸ್ತಿತ್ವ ಭಿನ್ನ, ವಿಚಾರಧಾರೆ ಭಿನ್ನ, ಎಂದು ನಂಬಿಸಿ ನಿರೂಪಿಸಿಕೊಳ್ಳುವ ಹರಸಾಹಸ ಮಾಡುತ್ತಿರುತ್ತಾರೆ. ಈ ಭಿನ್ನತೆಯನ್ನು ವ್ಯಾಪಕವಾಗಿ ಗುರುತಿಸಬಹುದಾದ ಪ್ರಕ್ರಿಯೆ ಆಗಬೇಕಿದೆ. ಗಾಂಧೀವಾದಿಗಳು ಚರ್ಚಿಸುವಾಗಿ ಬೋಸ್ ಮತ್ತು ಅಂಬೇಡ್ಕರ್‌ಗೆ ಗಾಂಧಿಯ ಜೊತೆ ಭಿನ್ನಾಭಿಪ್ರಾಯಗಳಿದ್ದವು ಅನ್ನುವ ಮಟ್ಟದಲ್ಲಿ ಚರ್ಚೆಯನ್ನು ನೆಲೆಗೊಳಿಸುತ್ತಾರೆ. ಆದರೆ, ಅಂಬೇಡ್ಕರ್ ಅನುಯಾಯಿಗಳಾಗಿ ಬರುವ ದಲಿತ ಮನಃಸ್ಥಿತಿಯಿಂದ ಚರಿತ್ರೆಯನ್ನು ಅರ್ಥೈಸುವ ಬುದ್ಧಿಜೀವಿಗಳು ಇದನ್ನು ಭಿನ್ನಾಭಿಪ್ರಾಯವೆಂದು ಪರಿಗಣಿಸದೇ ಅದನ್ನು ವಿರೋಧವಾಗಿ ಕಾಣುತ್ತಾರೆ. ಪ್ರಮುಖ ವಿಚಾರವಾದದ ಒಂದು ಶಾಖೆಯಂತೆ ಅದನ್ನು ನೋಡದೇ ಭಿನ್ನ ವಿಚಾರಧಾರೆಯಾಗಿ ಕಾಣಬೇಕು ಹಾಗೂ ಅದಕ್ಕೆ ಕೊಡಬೇಕಾದ ಪ್ರಾಮುಖ್ಯತೆಯನ್ನು